


# ಕ್ರೋಮ್ ಶತಾವತಾರ!

**ವೈವಿಧ್ಯಮಯ ಸೇವೆಗಳ ಮೂಲಕ ಜನಪ್ರಿಯಗೊಂಡಿರುವ 'ಗೂಗಲ್'ನ ಅತ್ಯುತ್ತಮ ಕೊಡುಗೆಗಳಲ್ಲಿ 'ಕ್ರೋಮ್' ಸಹ ಒಂದು. ಇದು ಅಸ್ತಿತ್ವಕ್ಕೆ ಬಂದ ನಂತರ ತನ್ನನ್ನೇ ತಾನು ಪರಾಮರ್ಶೆಗೆ ಒಡ್ಡಿಕೊಂಡು, ನಿರಂತರ ಹೊಸತನಕ್ಕೆ ಹಂಬಲಿಸುತ್ತಿದೆ. ಪ್ರಸ್ತುತ ಪರಿಷ್ಕೃತ ಆವೃತ್ತಿ, ಕ್ರೋಮ್‌ನ ಶತಾವತಾರ!**

**■ ಶಶಿಕುಮಾರ್ ಸಿ.**

ಜಗತ್ತಿನಾದ್ಯಂತ ಕೋಟ್ಯಂತರ ಮಂದಿಯ ಅತಿ ಮೆಚ್ಚಿನ ಹುಡುಕುತಾಣ 'ಗೂಗಲ್ ಕ್ರೋಮ್'. 2008ರ ಸೆಪ್ಟೆಂಬರ್ 2ರಂದು ಪ್ರಚಲಿತಕ್ಕೆ ಬಂದ ಕ್ರೋಮ್, ಅಂದಿನಿಂದ ಇಂದಿನವರೆಗೆ ಬರೋಬ್ಬರಿ ನೂರು ಬಾರಿ ಪರಾಮರ್ಶೆಗೊಂಡು ಹೊಸ ಸ್ವರೂಪ ಪಡೆದುಕೊಂಡಿದೆ. ಈಚೆಗಷ್ಟೇ ತನ್ನ ಶತಾವತಾರ ದರ್ಶನವನ್ನು ಕೋಟ್ಯಂತರ ಬಳಕೆದಾರರಿಗೆ ನೀಡಿದೆ.

ತನ್ನನ್ನು ತಾನು ನಿರಂತರ ಪರಿಷ್ಕಾರಕ್ಕೆ ಒಗ್ಗಿಸಿಕೊಳ್ಳುವುದು ಮತ್ತು ತನ್ನ ಬಳಕೆದಾರರೊಂದಿಗೆ ಮುಕ್ತವಾಗಿ ತೆರೆದುಕೊಳ್ಳುವುದು ಕ್ರೋಮ್‌ನಲ್ಲಿ ಮುಖ್ಯವಾಗಿ ಪರಿಗಣಿಸಬೇಕಾದ ಗುಣ. ಆರಂಭದಿಂದ ಇಂದಿನವರೆಗೆ ಹಲವಾರು ತಾಂತ್ರಿಕ ಬದಲಾವಣೆಗಳ ಮೂಲಕ ಹುಡುಕುತಾಣಕ್ಕೆ ಅಗತ್ಯವಾದ ಹಲವು ಸಾಧ್ಯತೆಗಳನ್ನು ಅದು ತನ್ನಲ್ಲಿ ಕಲ್ಪಿಸಿಕೊಡುತ್ತಿದೆ.

ಅಂತರ್ಜಾಲದ ಹುಡುಕು ತಾಣಗಳ ಕ್ಷೇತ್ರದಲ್ಲಿ ಪಾರುಪತ್ಯ ಸಾಧಿಸಿದ್ದ 'ಒಪೆರಾ' ಮತ್ತು 'ಫೈರ್‌ಫಾಕ್ಸ್'ಗಳ ನಡುವೆ ಗಟ್ಟಿಯಾಗಿ ನೆಲೆಯೂರಿದ ಕ್ರೋಮ್, ಎಲ್ಲ ಆಯಾಮಗಳಲ್ಲೂ ತನ್ನ ಮೇಲಿನ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬಂದಿದೆ. ಅಂದಹಾಗೆ, ಕ್ರೋಮ್ ಪಯಣ ಶುರುವಾದುದು, 'ಪ್ರಶ್ನೆಗಳಿಗೆ ಉತ್ತರಿಸುವ, ಲೆಕ್ಕಾಚಾರ ಮಾಡುವ ಹಾಗೂ ಹುಡುಕು ತಾಣವಾಗಿಯೂ ಕಾರ್ಯ ನಿರ್ವಹಿಸುವ' ಓಮ್ನಿಬಾಕ್ಸ್ ಜೊತೆಗೆ. ಪ್ರಸ್ತುತ, ಓಮ್ನಿಬಾಕ್ಸ್ ಮರೆಗೆ ಸರಿದಿದೆ.

ಕ್ರೋಮ್ ಸಾಮಾನ್ಯವಾಗಿ ಆರು ವಾರಗಳಿಗೆ ಒಮ್ಮೆ ಅಪ್‌ಡೇಟ್ ಆಗುವ ವಾಡಿಕೆಯನ್ನು ಹೊಂದಿತ್ತು. ಆದರೆ, ಕಳೆದ ವರ್ಷದಿಂದ ಕಂಪನಿಯು ನಾಲ್ಕು ವಾರಗಳಿಗೊಮ್ಮೆ ಹೊಸ ಫೀಚರ್‌ಗಳೊಂದಿಗೆ ರೂಪಾಂತರಗೊಳ್ಳುವ ಕ್ರಿಯೆಗೆ ಒಗ್ಗಿಕೊಂಡಿದೆ. ಕೆಲವೊಮ್ಮೆ ಈ ಅವಧಿ ತಾಂತ್ರಿಕ ಕಾರಣಗಳಿಂದ ವಿಸ್ತಾರವಾಗಿದ್ದೂ ಉಂಟು.

ಸದ್ಯ ವಿಂಡೋಸ್, ಮ್ಯಾಕ್, ಲೈನಕ್ಸ್, ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಕಾರ್ಯಾಚರಣೆ ವ್ಯವಸ್ಥೆಗಳಿಗೂ ಕ್ರೋಮ್‌ನ 100ನೇ ವರ್ಶನ್ ಅಪ್‌ಡೇಟ್ ಬಿಡುಗಡೆಯಾಗಿದೆ. ಈ ಬಾರಿ ಹೊಸ ವಿನ್ಯಾಸದಲ್ಲಿ ಕ್ರೋಮ್‌ನ ಲೋಗೊ ಸಹ ಹೊರಬಂದಿದೆ. ಲೋಗೊದಲ್ಲಿನ ಬಣ್ಣದಲ್ಲೂ ಬದಲಾವಣೆ ತಂದಿದೆ. ಡಿವೈಸ್‌ನ ಸೆಟ್ಟಿಂಗ್ಸ್‌ನಲ್ಲಿ ಕಾಣುವ ಹೆಲ್ಪ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಅಬೌಟ್ ಗೂಗಲ್ ಕ್ರೋಮ್ ಎಂಬ ಮತ್ತೊಂದು ಆಯ್ಕೆ ತೆರೆದುಕೊಳ್ಳುತ್ತದೆ. ಅದನ್ನು ಕ್ಲಿಕ್ಕಿಸಿದರೆ ಸ್ವಯಂಚಾಲಿತವಾಗಿ ಹೊಸ ಅಪ್‌ಡೇಟ್ ಬಗ್ಗೆ ಪರಿಶೀಲಿಸಿ ತಾನಾಗಿಯೇ ಇನ್‌ಸ್ಟಾಲ್ ಆಗುತ್ತದೆ.

ಗೂಗಲ್ ಅಡ್ರೆಸ್ ಬಾರ್, ಪಾಸ್‌ವರ್ಡ್ ಚೆಕ್, ಸಿಂಕ್, ಡಾರ್ಕ್ ಮೋಡ್, ಟ್ಯಾಬ್ಸ್, ಆರ್ಟಿಕಲ್ ಫಾರ್ ಯು, ಎಕ್ಸ್‌ಟೆನ್ಷನ್ಸ್ ಎಂಬ ಏಳು ಫೀಚರ್ಸ್ ಅನ್ನು ಕ್ರೋಮ್ ಈ ಬಾರಿ ಆಧುನೀಕರಿಸಿ ಪರಿಚಯಿಸಿದೆ. ಆ್ಯಂಡ್ರಾಯ್ಡ್ ಅಪ್ಲಿಕೇಷನ್‌ನಲ್ಲಿ ಬಳಕೆಯಾಗುವ 'ಲೈಟ್ ಮೋಡ್' ಅನ್ನು ಹೊಸ ಕ್ರೋಮ್‌ನಿಂದ ಕೈಬಿಡಲಾಗಿದೆ. ಕಡಿಮೆ ಮೊಬೈಲ್ ಡೇಟಾ ಬಳಕೆ ಮತ್ತು ವೆಬ್ ಪುಟಗಳು ವೇಗವಾಗಿ ತೆರೆಯಲು ಅನುವಾಗಲು 'ಲೈಟ್ ಮೋಡ್' ಬಳಕೆಯಾಗುತ್ತಿತ್ತು.

ಗೂಗಲ್ ಅಡ್ರೆಸ್ ಬಾರ್ ಫೀಚರ್ ಕೊಂಚ ವಿಭಿನ್ನವಾಗಿದ್ದು, ನೀವು ಯಾವ ವಿಷಯದ ಬಗ್ಗೆ ಕ್ರೋಮ್‌ನಲ್ಲಿ ಹುಡುಕುತ್ತಿದ್ದೀರೋ ಆ ವಿಷಯದ ಬಗ್ಗೆ ಪ್ರತ್ಯೇಕ ಲೊಗೊ ವಿಂಡೊದಲ್ಲಿ ಕಾಣಸಿಕೊಳ್ಳಲಿದೆ. ಗೂಗಲ್, ವೆದರ್, ಕ್ಯಾಲುಕ್ಯುಲೇಟರ್, ಟ್ರಾನ್ಸಲೇಟರ್, ಡ್ರೈವ್, ಕರೆನ್ಸಿ ಸಂಬಂಧಿತ ಲೊಗೊಗಳು ಕಾಣಿಸಿಕೊಳ್ಳುತ್ತವೆ.

ಪಾಸ್‌ವರ್ಡ್ ಚೆಕ್ ಬಗ್ಗೆ ಕ್ರೋಮ್ ಹೆಚ್ಚು ನಿಗಾವಹಿಸಲಿದ್ದು, ಸ್ಟ್ರಾಂಗ್ ಪಾಸ್‌ವರ್ಡ್ ರಚನೆಗೆ ಸ್ವಯಂಚಾಲಿತವಾಗಿ ಆದ್ಯತೆ ನೀಡುತ್ತದೆ. ಈ ಫೀಚರ್ ಈಗಾಗಲೇ ಡಿವೈಸ್‌ನಲ್ಲಿ ಸೇವ್ ಆಗಿರುವ ನಿಮ್ಮ ಪಾಸ್‌ವರ್ಡ್‌ಗಳ ಬಗ್ಗೆಯೂ ಪರಿಶೀಲಿಸಿ ಅದರಿಂದಾಗುವ ಆನ್‌ಲೈನ್ ವಂಚನೆ ಬಗ್ಗೆ ಎಚ್ಚರಿಸುತ್ತದೆ.

ಸಿಂಕ್ ಆಯ್ಕೆಯು ವಿಶೇಷವಾಗಿದ್ದು, ಲ್ಯಾಪ್‌ಟಾಪ್‌ನಿಂದ ನಿಮ್ಮ ಟ್ಯಾಬ್ಲೆಟ್, ಸ್ಮಾರ್ಟ್ ಫೋನ್ ಅಥವಾ ಅಂತರ್ಜಾಲ ಸಂಪರ್ಕ ಹೊಂದಿರುವ ಗೂಗಲ್ ಕ್ರೋಮ್ ಬಳಕೆಯ ಯಾವುದೇ ಡಿವೈಸ್‌ನೊಂದಿಗೆ ಇಂಟರ್ ಲಿಂಕ್ ಹೊಂದಿರುತ್ತದೆ. ಸಿಂಕ್ ಆಯ್ಕೆಯನ್ನು ಟರ್ನ್ ಆನ್ ಮಾಡಿದರೆ ನೀವು ಎಲ್ಲೇ ಹೋದರೂ ಬಳಸುವ ಡಿವೈಸ್‌ಗಳೊಂದಿಗೆ ಬುಕ್‌ಮಾರ್ಕ್ಸ್, ಸೇವ್ಡ್ ಪಾಸ್‌ವರ್ಡ್ ಹಾಗೂ ಸೆಕ್ಯೂರ್ ಪೇಮೆಂಟ್ ವಿಧಾನಕ್ಕೆ ನೆರವಾಗುತ್ತದೆ. ಡಾರ್ಕ್ ಮೋಡ್ ಆಯ್ಕೆಯು ಬೇರೆ ಬೇರೆ ಥೀಮ್‌ಗಳನ್ನು, ಡಿಸ್‌ಪ್ಲೇ ಕಲರ್ ಅನ್ನು ಡಿವೈಸ್‌ನಲ್ಲಿ ಸೆಟ್ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ವಿಶೇಷ ಲೇಖನಗಳು ನಿಮ್ಮ ಕಣ್ತಪ್ಪದಂತೆ ಕ್ರೋಮ್ ಸಾಧ್ಯವಾದಷ್ಟು ನಿಗಾವಹಿಸಿ, ನಿಮ್ಮ ಗಮನಕ್ಕೆ ತರುತ್ತದೆ. ■